॥ ಶ್ರೀಹನುಮತೇ ನಮಃ ॥

# ಶ್ರೀಹನುಮಾನ್ ಚಾಲೀಸಾ

## ದೋಹಾ

**ಶ್ರೀ ಗುರು ಚರನ ಸರೋಜ ರಜ, ನಿಜ ಮನು ಮುಕುರು ಸುಧಾರಿ।**
**ಬರನಉ ರಘುಬರ ಬಿಮಲ ಜಸು, ಜೋ ದಾಯಕು ಫಲ ಚಾರಿ ॥**

ಶ್ರೀಗುರು ಚರಣ ಕಮಲಗಳ ಧೂಳಿನಿಂದ ನನ್ನ ಮನರೂಪೀ ಕನ್ನಡಿಯನ್ನು ಸ್ವಚ್ಛಮಾಡಿಕೊಂಡು ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ಚತುರ್ವಿಧ ಪುರುಷಾರ್ಥರೂಪೀ ಫಲಗಳನ್ನು ದಯಪಾಲಿಸುವಂತಹ ರಘುವರನ ನಿರ್ಮಲವಾದ ಯಶಸ್ಸನ್ನು ವರ್ಣಿಸಿ ಹಾಡುತ್ತೇನೆ. ॥೧॥

**ಬುದ್ಧಿಹೀನ ತನು ಜಾನಿಕೆ, ಸುಮಿರೌ ಪವನ ಕುಮಾರ ।**
**ಬಲ ಬುಧಿ ಬಿದ್ಯಾ ದೇಹು ಮೋಹಿ, ಹರಹು ಕಲೇಸ ಬಿಕಾರ ॥**

ಹೇ ಪವನಕುಮಾರ ! ನನ್ನ ಪ್ರಾರ್ಥನೆಯನ್ನು ಕೇಳು - ಬುದ್ಧಿ-ಹೀನನಾದ ನನಗೆ ಒಳ್ಳೆಯ ಬುದ್ಧಿಯನ್ನು ಕರುಣಿಸು, ಬಲ, ಬುದ್ಧಿ, ಜ್ಞಾನ ಇತ್ಯಾದಿಗಳನ್ನು ಕೊಟ್ಟು, ಅಜ್ಞಾನ, ಕ್ಲೇಶ, ಭ್ರಮೆ, ರಾಗ ದ್ವೇಷಾದಿ ಪಂಚಕ್ಲೇಶಗಳನ್ನು ಮತ್ತು ಜನನ-ಮರಣಾದಿ ಆರು ವಿಕಾರಗಳನ್ನು ಹೋಗಲಾಡಿಸು. ॥೨॥

## ಚೌಪಾಯೀ

**ಜಯ ಹನುಮಾನ ಜ್ಞಾನ ಗುನ ಸಾಗರ ।**
**ಜಯ ಕಪೀಸ ತಿಹುँ ಲೋಕ ಉಜಾಗರ ॥೧॥**

ಹೇ, ಹನುಮಂತಾ ! ನೀನು ಜ್ಞಾನ ಹಾಗೂ ಗುಣಗಳ ಸಾಗರ. ಎಲೈ ಕಪಿವರ ! ನಿನ್ನ ತೇಜಸ್ಸಿನ ಪ್ರಕಾಶದಿಂದ ಮೂರು ಲೋಕಗಳೂ ಶೋಭಾಯಮಾನವಾಗಿವೆ. ನಿನಗೆ ಜಯವಾಗಲಿ. ॥೧॥

**ರಾಮ ದೂತ ಅತುಲಿತ ಬಲ ಧಾಮಾ ।**
**ಅಂಜನಿ-ಪುತ್ರ ಪವನಸುತ ನಾಮಾ ॥೨॥**

ಓ ರಾಮದೂತ ! ನೀನು ಅತುಲನೀಯ ಪರಾಕ್ರಮದ ನೆಲೆಯಾಗಿರುವೆ. ವಾಯುಪುತ್ರನೆಂಬ ಹೆಸರು ಪಡೆದಿರುವ ಅಂಜನಾದೇವಿಯ ಮಗನಾದ ಆಂಜನೇಯನೇ ನಿನಗೆ ವಂದನೆ. ॥೨॥

**ಮಹಾಬೀರ ಬಿಕ್ರಮ ಬಜರಂಗೀ ।**
**ಕುಮತಿ ನಿವಾರ ಸುಮತಿ ಕೆ ಸಂಗೀ ॥೩॥**

ಓ ಕಪೀಶ್ವರ ! ನೀನು ಮಹಾನ್ ವೀರ, ಮಹಾಪರಾಕ್ರಮಿ ಮತ್ತು ನಿನ್ನ ಶರೀರ ವಜ್ರದಂತೆ ಬಲಯುತವಾಗಿದೆ. ನೀನು ದುರ್ಬುದ್ಧಿಯನ್ನು ನಾಶ ಮಾಡಿ ಸದ್ಬುದ್ಧಿಯುಳ್ಳವರ ಸಂಗವನ್ನು ದೊರಕಿಸಿಕೊಡುವೆ, ನಿನಗೆ ಸಾಷ್ಟಾಂಗ ವಂದನೆ. ॥೩॥

**ಕಂಚನ ಬರನ ಬಿರಾಜ ಸುಬೇಸಾ ।**
**ಕಾನನ ಕುಂಡಲ ಕುಂಚಿತ ಕೇಸಾ ॥೪॥**

ಬಂಗಾರದಂತಹ ಕಾಂತಿಯ ನಿನ್ನೀ ಸುಂದರ ವೇಷವು ಬಹಳ ಶೋಭಾಯಮಾನವಾಗಿದೆ. ಸುಂದರವಾದ ಕರ್ಣಕುಂಡಲಗಳಿಂದಲೂ, ಅಂದವಾದ ಗುಂಗುರು ಮಿಂಚಿನಂಥ ಕೇಶರಾಶಿಗಳಿಂದಲೂ, ಶೋಭಿಸುತ್ತಿರುವ ಹನುಮಂತನೇ ನಿನಗೆ ಅನಂತ ನಮಸ್ಕಾರಗಳು. ||೪||

**ಹಾಥ ಬಜ್ರ ಔ ಧ್ವಜಾ ಬಿರಾಜೈ |**
**ಕಾಂಧೇ ಮೂಂಜ ಜನೇಊ ಸಾಜೈ ||೫||**

ವಜ್ರದಂತಹ ಗದೆ ಮತ್ತು ಧ್ವಜ ನಿನ್ನ ಕೈಗಳಲ್ಲಿ ವಿಶೇಷ ರೂಪದಿಂದ ಕಾಂತಿಯನ್ನು ಪಡೆಯುತ್ತಿವೆ. ನಿನ್ನ ಹೆಗಲಮೇಲೆ ಪವಿತ್ರವಾದ ಯಜ್ಞೋಪವೀತವು ಅಲಂಕಾರ ಪ್ರಾಯವಾಗಿದೆ. ಓ ಮಾರುತಾತ್ಮಜ ನಿನಗೆ ಪ್ರಣಾಮಗಳು ||೫||

**ಸಂಕರ ಸುವನ ಕೇಸರೀನಂದನ |**
**ತೇಜ ಪ್ರತಾಪ ಮಹಾ ಜಗ ಬಂದನ ||೬||**

ಎಲೈ ಮಾರುತಿ ! ನೀನು ಸಾಕ್ಷಾತ್ ಶಂಕರ. ನೀನೇ ಭಗವಾನ್ ಶ್ರೀರಾಮನ ಕೈಂಕರ್ಯ ಮಾಡುವುದಕ್ಕೋಸ್ಕರ ಕೇಸರೀನಂದನನ ರೂಪದಲ್ಲಿ ಅವತರಿಸಿರುವೆ. ನಿನ್ನ ತೇಜಸ್ಸು ಹಾಗೂ ಪ್ರತಾಪ ಮಹತ್ತರವಾದುದ್ದು. ಜಗತ್ತೆಲ್ಲಾ ನಿನಗೆ ತಲೆಬಾಗಿ ನಮಿಸುವುದು. ॥೬॥

**ಬಿದ್ಯಾವಾನ ಗುನೀ ಅತಿ ಚಾತುರ ।**
**ರಾಮ ಕಾಜ ಕರಿಬೇ ಕೋ ಆತುರ ॥೭॥**

ನೀನು ದೊಡ್ಡ ವಿದ್ವಾಂಸ, ಅಂತೆಯೇ ಸದ್ಗುಣ ಸಂಪನ್ನ ಹಾಗೂ ಅತ್ಯಂತ ಚತುರ. ಶ್ರೀರಾಮನ ಕಾರ್ಯಗಳನ್ನು ಮಾಡಲು ಸದಾ ಅತ್ಯಂತ ಉತ್ಸುಕನಾಗಿರುವ ರಾಮದೂತನೇ ನಿನಗೆ ಶರಣು. ॥೭॥

**ಪ್ರಭು ಚರಿತ್ರ ಸುನಿಬೇ ಕೋ ರಸಿಯಾ ।**
**ರಾಮ ಲಖನ ಸೀತಾ ಮನ ಬಸಿಯಾ ॥೮॥**

ಪ್ರಭು ಶ್ರೀರಾಮಚಂದ್ರನ ದಿವ್ಯ ಚರಿತ್ರೆಯನ್ನು ಕೇಳುತ್ತಾ ಮೈಮರೆಯುವ ರಸಿಕ ನೀನು. ಶ್ರೀರಾಮ, ಸೀತಾಮಾತೆ ಮತ್ತು ಲಕ್ಷ್ಮಣರನ್ನು ನಿನ್ನ ಹೃದಯದಲ್ಲಿ ನೆಲೆಯಾಗಿಸಿಕೊಂಡಿರುವ ಕಪಿವರ್ಯನೇ! ನಿನಗೆ ನನ್ನ ಅಗಣಿತ ವಂದನೆಗಳು. ||೮||

**ಸೂಕ್ಷ್ಮ ರೂಪ ಧರಿ ಸಿಯಹಿಂ ದಿಖಾವಾ ।**
**ಬಿಕಟ ರೂಪ ಧರಿ ಲಂಕ ಜರಾವಾ ||೯||**

ಲಂಕಾನಗರದ ಅಶೋಕವನದಲ್ಲಿದ್ದ ಸೀತಾಮಾತೆಯನ್ನು ಕಾಣಲು ಹೋದಾಗ ಸೂಕ್ಷ್ಮರೂಪವನ್ನು ಧರಿಸಿ ಆಕೆಗೆ ಕಾಣಿಸಿಕೊಂಡವನೇ ಮತ್ತು ಲಂಕಾಪಟ್ಟಣವನ್ನು ಸುಟ್ಟು ಭಸ್ಮ ಮಾಡುವಾಗ ಭಯಂಕರ ರೂಪವನ್ನು ತಳೆದವನೇ, ಓ ಲೀಲಾಮಯ ಹನುಮನೇ! ನಿನಗೆ ವಂದನೆಗಳು. ||೯||

**ಭೀಮ ರೂಪ ಧರಿ ಅಸುರ ಸಂಹಾರೇ ।**
**ರಾಮಚಂದ್ರ ಕೇ ಕಾಜ ಸಂವಾರೇ ||೧೦||**

ಭಯಂಕರ ರೂಪವನ್ನು ತಾಳಿ ಅಸುರರನ್ನು ಸಂಹಾರ ಮಾಡಿ ಶ್ರೀರಾಮನ ಕೈಂಕರ್ಯವನ್ನು ಸಾಧಿಸಿದ ಧೀರನೇ ನಿನಗೆ ವಂದನೆ. ॥೧೦॥

**ಲಾಯ ಸಜೀವನ ಲಖನ ಜಿಯಾಯೇ ।**
**ಶ್ರೀರಘುಬೀರ ಹರಷಿ ಉರ ಲಾಯೆ ॥೧೧॥**

ಸಂಜೀವಿನಿಯೆಂಬ ದಿವ್ಯೌಷಧಿಯನ್ನು ತಂದು ಮೂರ್ಛಿತನಾಗಿದ್ದ ಲಕ್ಷ್ಮಣನನ್ನು ಬದುಕಿಸಿದ ನಿನ್ನನ್ನು ಶ್ರೀರಘುವೀರನು ಸಂತಸದಿಂದ ಎದೆಗೆ ಬಿಗಿದಪ್ಪಿಕೊಂಡನು. ॥೧೧॥

**ರಘುಪತಿ ಕೀನ್ಹೀ ಬಹುತ ಬಡಾಯೀ ।**
**ತುಮ ಮಮ ಪ್ರಿಯ ಭರತಹಿ ಸಮ ಭಾಯೀ ॥೧೨॥**

ಹಾಗೂ ಸಂತುಷ್ಟನಾದ ಶ್ರೀರಾಮನು ನಿನ್ನನ್ನು ಬಹಳವಾಗಿ ಪ್ರಶಂಸಿಸಿ – 'ನೀನು ನನ್ನ

ಪ್ರಿಯ ಸಹೋದರ ಭರತನಿಗೆ ಸಮನಾಗಿ ಪ್ರಿಯವಾಗಿರುವೆ'ಎಂದು ಹೇಳಿದನು. ॥೧೨॥

**ಸಹಸ ಬದನ ತುಮ್ಹರೋ ಜಸ ಗಾವೈಂ ।**
**ಅಸ ಕಹಿ ಶ್ರೀಪತಿ ಕಂಠ ಲಗಾವೈಂ ॥೧೩॥**

ಸಹಸ್ರ ಮುಖಗಳು ನಿನ್ನ ಕೀರ್ತಿಯನ್ನು ಹಾಡಿಹೊಗಳುತ್ತಾ ಇವೆ – ಎಂದು ಹೇಳುತ್ತಾ ಹರ್ಷ ಪೂರಿತನಾದ ಸೀತಾಪತಿ ರಾಮಚಂದ್ರನು ನಿನ್ನನ್ನು ಗಾಢವಾಗಿ ಆಲಂಗಿಸಿದನು. ಹೇ ಭಕ್ತವರ ಹನುಮಾನ್ ! ನಿನಗೆ ಪುನಃ ಪುನಃ ವಂದನೆಗಳು. ॥೧೩॥

**ಸನಕಾದಿಕ ಬ್ರಹ್ಮಾದಿ ಮುನೀಸಾ ।**
**ನಾರದ ಸಾರದ ಸಹಿತ ಅಹೀಸಾ ॥೧೪॥**

ನಾರದ ಮಹರ್ಷಿಗಳು, ಸನಕಾದಿ ಮುನಿಗಳು, ಆದಿಶೇಷ , ಬ್ರಹ್ಮ ಮತ್ತು ಶಾರದಾದೇವಿ ಸಹಿತ ನಿನ್ನ ಗುಣಗಳನ್ನು ಹಾಡಿ ಹೊಗಳುವರು. ಎಲೈ ಆಂಜನೇಯನೇ ! ನಿನಗೆ ನಮಸ್ಕಾರಗಳು. ॥೧೪॥

**ಜಮ ಕುಬೇರ ದಿಗಪಾಲ ಜಹಾಂ ತೇ ।**
**ಕಬಿ ಕೋಬಿದ ಕಹಿ ಸಕೇ ಕಹಾಂ ತೇ ॥೧೫॥**

ಯಮ, ಕುಬೇರ ಮೊದಲಾದ ಎಲ್ಲಾ ದಿಕ್ಪಾಲಕರೂ, ದೇವತೆಗಳೂ, ಘನವಿದ್ವಾಂಸರೂ ಹಾಗೂ ಮಹಾನ್ ಕವಿಗಳೂ ಸಹ ನಿನ್ನ ಗುಣಗಳನ್ನು ಮೆಚ್ಚಿ ವರ್ಣಿಸುವರು. ಹೇ, ಹನುಮಂತನೇ ! ನಿನಗೆ ಸಾಷ್ಟಾಂಗ ನಮಸ್ಕಾರಗಳು. ॥೧೫॥

**ತಮ ಉಪಕಾರ ಸುಗ್ರೀವಹಿಂ ಕೀನ್ಹಾ ।**
**ರಾಮ ಮಿಲಾಯ ರಾಜ ಪದ ದೀನ್ಹಾ ॥೧೬॥**

ರಾಜ್ಯವನ್ನು ಕಳೆದುಕೊಂಡು ಗಿರಿ - ಶಿಖರಗಳಲ್ಲಿ ವಾಸಿಸುತ್ತಿದ್ದ ಸುಗ್ರೀವನಿಗೆ ಶ್ರೀರಾಮನೊಡನೆ ಮಧುರ ಮಿಲನ ಮಾಡಿಸಿ, ಅವನಿಗೆ ಪುನಃ ರಾಜ್ಯವನ್ನು ಕೊಡಿಸಿ ಮಹದುಪಕಾರ ಮಾಡಿದ ಪವನ ಕುಮಾರನೇ ನಿನಗೆ ನಮ್ಮ ನಮನಗಳು. ॥೧೬॥

ತುಮ್ಹರೋ ಮಂತ್ರ ಬಿಭೀಷನ ಮಾನಾ ।
ಲಂಕೇಸ್ವರ ಭಏ ಸಬ ಜಗ ಜಾನಾ ॥೧೭॥

ನಿನ್ನ ಹಿತೋಪದೇಶಗಳನ್ನು ಮೆಚ್ಚಿ ವಿಭೀಷಣನು ಅದರಂತೆ ನಡೆದುಕೊಂಡು ಶ್ರೀರಾಮನಲ್ಲಿ ಶರಣಾದನು. ತತ್ಪರಿಣಾಮವಾಗಿ ಬಳಿಕ ವಿಭೀಷಣನು ಲಂಕಾಧಿಪತಿಯಾದುದನ್ನು ಜಗತ್ತೆಲ್ಲಾ ಬಲ್ಲದು. ॥೧೭॥

ಜುಗ ಸಹಸ್ರ ಜೋಜನ ಪರ ಭಾನೂ ।
ಲೀಲ್ಯೋತಾಹಿ ಮಧುರ ಫಲ ಜಾನೂ ॥೧೮॥

ಆಕಾಶದಲ್ಲಿ ಕಂಡ ಹೊಂಬಣ್ಣದ ರವಿಯನ್ನು ಮಧುರವಾದ ಹಣ್ಣೆಂದು ತಿಳಿದು ಸಾವಿರಾರು ಯೋಜನ ದೂರ ಅಂತರಿಕ್ಷಕ್ಕೆ ಲೀಲಾಜಾಲವಾಗಿ ಹಾರಿದ ಮಹಾಧೀರ ಹನುಮಾನ್ ನಿನಗೆ ಶರಣು. ॥೧೮॥

**ಪ್ರಭು ಮುದ್ರಿಕಾ ಮೆಲಿ ಮುಖ ಮಾಹೀಂ ।**
**ಜಲಧಿ ಲಾಂಘಿ ಗಯೇ ಅಚರಜ ನಾಹೀಂ ॥೧೯॥**

ಪ್ರಭು ಶ್ರೀರಾಮನಿತ್ತ ಪವಿತ್ರವಾದ ಮುದ್ರಿಕೆಯನ್ನು ಬಾಯಲ್ಲಿಟ್ಟುಕೊಂಡು ಸಮುದ್ರವನ್ನು ಅನಾಯಾಸವಾಗಿ ಹಾರಿ ದಾಟಿದಂತಹ ಮಹಾವೀರನಾದ ನಿನಗೆ ಅದು ಆಶ್ಚರ್ಯವೇನಲ್ಲ. ॥೧೯॥

**ದುರ್ಗಮ ಕಾಜ ಜಗತ ಕೇ ಜೇತೇ ।**
**ಸುಗಮ ಅನುಗ್ರಹ ತುಮ್ಹರೇ ತೇತೇ ॥೨೦॥**

ಜಗತ್ತಿನಲ್ಲಿ ಎಷ್ಟೋ ಕಠಿಣ ಕಾರ್ಯಗಳಿದ್ದರೂ ಅವು ನಿನ್ನ ಅನುಗ್ರಹದಿಂದ ನಿನ್ನ ಭಕ್ತರಿಗೆ ಅಷ್ಟೇ ಸುಲಭ ಸಾಧ್ಯವಾಗುತ್ತವೆ. ಓ, ಮಾರುತಾತ್ಮಜನೇ ನಿನಗೆ ಅನಂತ ವಂದನೆಗಳು ॥೨೦॥

**ರಾಮ ದುಆರೇ ತುಮ ರಖವಾರೇ ।**
**ಹೋತ ನ ಆಜ್ಞಾ ಬಿನು ಪೈಸಾರೇ ॥೨೧॥**

ಹೇ ರಾಮದೂತ! ನಿನ್ನ ಅನುಗ್ರಹವಿಲ್ಲದೆ ಯಾರಿಗೂ ಪ್ರಭು ರಾಮಚಂದ್ರನ ದರ್ಶನಭಾಗ್ಯ ಲಭಿಸದು. ಏಕೆಂದರೆ ನೀನು ರಾಮಚಂದ್ರ ಮೂರ್ತಿಗೆ ಅತ್ಯಂತ ಪ್ರೀತಿಪಾತ್ರನಾಗಿರುವೆ. ॥೨೧॥

**ಸಬ ಸುಖ ಲಹೈ ತುಮ್ಹಾರೀ ಸರನಾ ।**
**ತುಮ ರಚ್ಛಕ ಕಾಹೂ ಕೋ ಡರನಾ ॥೨೨॥**

ನಿನ್ನಲ್ಲಿ ಶರಣಾಗತರಾದ ಭಕ್ತರಿಗೆ ಎಲ್ಲಾ ದಿವ್ಯ ಸುಖ ಸಂಪತ್ತುಗಳೂ ಪ್ರಾಪ್ತಿಯಾಗುತ್ತವೆ. ನೀನು ರಕ್ಷಕನಾಗಿರುವಾಗ ನಮಗೇಕೆ ಜನನ - ಮರಣರೂಪೀ ಭವರೋಗದ ಭಯ? ಓ, ಶರಣಾಗತ ರಕ್ಷಕ ಹನುಮಾ! ನಿನಗೆ ವಂದನೆಗಳು. ॥೨೨॥

**ಆಪನ ತೇಜ ಸಮ್ಹಾರೋ ಆಪೈ ।**
**ತೀನೋಂ ಲೋಕ ಹಾಂಕ ತೇಂ ಕಾಂಪೈ ॥೨೩॥**

ನಿನ್ನ ಈ ಪರಮ ತೇಜಸ್ಸಿಗೆ ನೀನೇ ಸಾಟಿಯಲ್ಲದೆ ಬೇರೆ ಯಾರೂ ಇಲ್ಲ. ನೀನು ಹೂಂಕರಿಸಿದರೆ ಮೂರು ಲೋಕಗಳೂ ನಡುಗಿ ತತ್ತರಿಸಿ ಹೋಗುವುವು. ॥೨೩॥

**ಭೂತ ಪಿಸಾಚ ನಿಕಟ ನಹಿಂ ಆವೈ ।**
**ಮಹಾಬೀರ ಜಬ ನಾಮ ಸುನಾವೈ ॥೨೪॥**

ಎಲೈ ಮಹಾವೀರ ! ನಿನ್ನ ನಾಮಸ್ಮರಣೆಯಿಂದ ಭೂತ ಪಿಶಾಚಾದಿ ದುಷ್ಟರು ಹತ್ತಿರಕ್ಕೆ ಸುಳಿಯಲಾರವು. ಎಲೈ ಪ್ರತಾಪಶಾಲಿಯೇ ! ನಿನಗೆ ವಂದನೆಗಳು. ॥೨೪॥

**ನಾಸೈ ರೋಗ ಹರೈ ಸಬ ಪೀರಾ ।**
**ಜಪತ ನಿರಂತರ ಹನುಮತ ಬೀರಾ ॥೨೫॥**

ಓ, ವೀರ ಹನುಮಂತ ! ನಿರಂತರ ನಿನ್ನ ನಾಮವನ್ನು ಜಪಿಸುವುದರಿಂದ ಜನನ-ಮರಣಾದಿ ಭವ-ರೋಗಗಳೆಲ್ಲಾ ನಾಶವಾಗಿ ಹೋಗುತ್ತವೆ ಮತ್ತು ಕಷ್ಟ-ಕಾರ್ಪಣ್ಯಗಳೆಲ್ಲವೂ ತೊಲಗಿ ಹೋಗುತ್ತವೆ. ನಿನಗೆ ಸಾಷ್ಟಾಂಗ ನಮಸ್ಕಾರಗಳು. ॥೨೫॥

**ಸಂಕಟ ತೇಂ ಹನುಮಾನ ಛುಡಾವೈ ।**
**ಮನ ಕ್ರಮ ಬಚನ ಧ್ಯಾನ ಜೋ ಲಾವೈ ॥೨೬॥**

ಕಾಯಾ - ವಾಚಾ - ಮನಸಾ ನಿರ್ಮಲನಾಗಿ ದೃಢ ಸಂಕಲ್ಪದಿಂದ ಧ್ಯಾನಿಸುವ ಭಕ್ತರನ್ನು ಸಂಕಟದಿಂದ ಪಾರುಮಾಡುವ ಹೇ ಹನುಮಂತಾ ! ನಿನಗೆ ಶಿರಬಾಗಿ ನಮಿಸುವೆನು. ॥೨೬॥

**ಸಬ ಪರ ರಾಮ ತಪಸ್ವೀ ರಾಜಾ ।**
**ತಿನ ಕೇ ಕಾಜ ಸಕಲ ತುಮ ಸಾಜಾ ॥೨೭॥**

ಸಾರ್ವಭೌಮನಾದ ಶ್ರೀರಾಮಚಂದ್ರ ತಪೋಧನನು, ರಾಜರಾಜೇಶ್ವರನಾದ ಆತನ ಸಕಲ ಕಾರ್ಯಗಳಲ್ಲಿ ಭಾಗಿಯಾಗಿ ಅವುಗಳನ್ನು ಸಫಲಗೊಳಿಸಿದ ಶ್ರೀರಾಮನ ಬಂಟನಾದ ಹನುಮಂತನೇ ನಿನಗೆ ಶರಣು. ॥೨೭॥

**ಔರ ಮನೋರಥ ಜೋ ಕೋಇ ಲಾವೈ ।**

**ಸೋಇ ಅಮಿತ ಜೀವನ ಫಲಪಾವೈ ॥೨೮॥**

ಭಕ್ತರ ಮನೋರಥವನ್ನು ಈಡೇರಿಸುತ್ತಾ ಅವರಿಗೆ ಪರಮಾತ್ಮನ ಪ್ರಾಪ್ತಿರೂಪೀ ಫಲವನ್ನು ದಯಪಾಲಿಸುವ ದಯಾಳುವೇ ನಿನಗೆ ವಂದನೆಗಳು ॥೨೮॥

**ಚಾರೋಂ ಜುಗ ಪರತಾಪ ತುಮ್ಹಾರಾ ।**

**ಹೈ ಪರಸಿದ್ಧ ಜಗತ ಉಜಿಯಾರಾ ॥೨೯॥**

ನಾಲ್ಕು ಯುಗಗಳಲ್ಲಿಯೂ ನಿನ್ನ ಪ್ರತಾಪವೇ ಜನನಿತವಾಗಿದೆ. ನಿನ್ನ ಭಕ್ತಿರೂಪೀ ತೇಜಸ್ಸು ಜಗತ್ತಿನಲ್ಲಿ ಎಲ್ಲೆಲ್ಲಿಯೂ ಪ್ರಕಾಶಿಸುತ್ತಾ ಪ್ರಸಿದ್ಧಿ ಪಡೆದಿದೆ. ॥೨೯॥

**ಸಾಧು ಸಂತ ಕೇ ತುಮ ರಖವಾರೇ ।**
**ಅಸುರ ನಿಕಂದನ ರಾಮ ದುಲಾರೇ ॥೩೦॥**

ನೀನು ಸಾಧು - ಸಂತರಾದಿ ಸತ್ಪುರುಷರನ್ನು ರಕ್ಷಿಸುವವನು. ಅಸುರರಾದಿ ದುಷ್ಟರನ್ನು ಸಂಹಾರ ಮಾಡುವವನು. ಈ ನಿನ್ನ ಶಿಷ್ಟರಕ್ಷಕ ಮತ್ತು ದುಷ್ಟಶಿಕ್ಷಕ ಕಾರ್ಯಗಳಿಂದ ಶ್ರೀರಾಮಚಂದ್ರನು ನಿನ್ನನ್ನು ಬಹಳ ಮೆಚ್ಚಿಕೊಂಡು ಪ್ರೀತಿಸುತ್ತಾನೆ. ॥೩೦॥

**ಅಷ್ಟ ಸಿದ್ಧಿ ನವ ನಿಧಿ ಕೇ ದಾತಾ ।**
**ಅಸ ಬರ ದೀನ ಜಾನಕೀ ಮಾತಾ ॥೩೧॥**

ಜಾನಕೀಮಾತೆಯ ಹರಕೆಯಿಂದ ನೀನು ನಿನ್ನ ಭಕ್ತರಿಗೆ ಅಣಿಮಾದಿ ಅಷ್ಟಸಿದ್ಧಿಗಳನ್ನೂ ಮತ್ತು ನವನಿಧಿಗಳನ್ನೂ ಕೊಡಬಲ್ಲವನಾಗಿರುವೆ, ಹಾಗೆ ವರಪ್ರಸಾದ ನೀಡುತ್ತಿರುವೆ. ॥೩೧॥

**ರಾಮ ರಸಾಯನ ತುಮ್ಹರೇ ಪಾಸಾ ।**
**ಸದಾ ರಹೋ ರಘುಪತಿ ಕೇ ದಾಸಾ ॥೩೨॥**

ನೀನು ರಾಮ - ನಾಮ ರೂಪೀ ರಸಾಮೃತವನ್ನು ಪಾನಮಾಡುತ್ತಿರುವೆ. ಎಂದೆಂದೂ ರಘುಪತಿಯ ಸನ್ನಿಧಿಯಲ್ಲಿರುವೆ. ಓ ಆಂಜನೇಯನೇ ! ನಿನಗೆ ದಂಡವತ್ ಪ್ರಣಾಮಗಳು. ॥೩೨॥

**ತುಮ್ಹರೇ ಭಜನ ರಾಮ ಕೋ ಪಾವೈ ।**
**ಜನಮ ಜನಮ ಕೇ ದುಖ ಬಿಸರಾವೈ ॥೩೩॥**

ನಿನ್ನ ಪಾವನ ನಾಮವನ್ನು ಭಜಿಸುವವರಿಗೆ ಪ್ರಭು ಶ್ರೀರಾಮಚಂದ್ರನ ದರ್ಶನಲಾಭ ಉಂಟಾಗುವುದು. ಜನ್ಮ - ಜನ್ಮಾಂತರಗಳ ಪಾಪನಾಶವಾಗುವುದಲ್ಲದೆ ಪುನರ್ಜನ್ಮ ಕೂಡ ಇಲ್ಲದಂತಾಗುವುದು. ಎಲೈ ಶ್ರೀರಾಮದೂತನೇ ! ನಿನಗೆ ವಂದನೆ. ॥೩೩॥

**ಅಂತ ಕಾಲ ರಘುಬರ ಪುರ ಜಾಈ ।**
**ಜಹಾಂ ಜನ್ಮ ಹರಿ-ಭಕ್ತ ಕಹಾಈ ॥೩೪॥**

ಗಾಢವಾದ ಭಕ್ತಿಯುಳ್ಳ ನಿನ್ನ ಭಕ್ತರು ಮರಣಾನಂತರ ಭಗವಾನ್ ಶ್ರೀರಾಮನ ಪರಮಪದವನ್ನು ಪಡೆಯುತ್ತಾರೆ. ಇಲ್ಲಿ ಬದುಕಿರುವವರೆಗೂ ಅವನು ಭಗವಂತನ ಭಕ್ತನೆಂದು ಜನ ಆತನಿಂದ ಪ್ರಭಾವಿತರಾಗುವರು. ಓ ರಾಮ ಸೇವಕನೇ! ನಿನಗೆ ವಂದನೆ. ॥೩೪॥

**ಔರ ದೇವತಾ ಚಿತ್ತ ನ ಧರಈ ।**
**ಹನುಮತ ಸೇಇ ಸರ್ವ ಸುಖ ಕರಈ ॥೩೫॥**

ಇತರ ದೇವತೆಗಳನ್ನು ಬಿಟ್ಟು ಅನನ್ಯಭಾವದಿಂದ ನಿನ್ನನ್ನು ಭಜಿಸುವವರು ಸರ್ವವಿಧದ ಸುಖಗಳನ್ನು ಪಡೆಯುತ್ತಾರೆ. ॥೩೫॥

**ಸಂಕಟ ಕಟ್ಟೈ ಮಿಟ್ಟೈ ಸಬ ಪೀರಾ ।**
**ಜೋ ಸುಮಿರೈ ಹನುಮತ ಬಲಬಿರಾ ॥೩೬॥**

ಮಹಾಬಲಶಾಲಿಯಾದ ಹನುಮಂತನೇ! ನಿನ್ನನ್ನು ಭಜಿಸುವ ಭಕ್ತರ ಎಲ್ಲಾ ಸಂಕಟ ಮತ್ತು ಪೀಡೆಗಳಿಂದಲೂ ಪಾರಾಗುವರು. ಎಲೈ ಸಂಕಟಹರನೇ! ನಿನಗೆ ಪ್ರಣಾಮಗಳು. ॥೩೬॥

**ಜಯ ಜಯ ಜಯ ಹನುಮಾನ ಗೊಸಾಈ ।**
**ಕೃಪಾ ಕರಹು ಗುರು ದೇವ ಕಿ ನಾಈ ॥೩೭॥**

ಜಿತೇಂದ್ರಿಯನಾದ ವೀರ ಹನುಮಂತಾ ! ನಿನಗೆ ನಿನ್ನ ಸ್ವಾಮಿಯ ಸೇವಾಕಾರ್ಯಗಳಲ್ಲಿ ಜಯ ನಿಶ್ಚಿತ. ಗುರುದೇವನ ರೀತಿಯಲ್ಲಿ ನನ್ನ ಮೇಲೆ ಕೃಪೆ ತೋರಿಸು. ನಿನಗೆ ಸಾವಿರಾರುಬಾರಿ ಜಯಜಯಕಾರವು. ॥೩೭॥

**ಜೋ ಸತ ಬಾರ ಪಾಠ ಕರ ಕೋಈ ।**
**ಛೂಟಹಿ ಬಂದಿ ಮಹಾ ಸುಖ ಹೋಈ ॥೩೮॥**

ಯಾರು ಈ ಹನುಮಾನ ಚಾಲಿಸಾವನ್ನು ನೂರು ಬಾರಿ ಪಠಿಸುವರೋ, ಅವರು ಸರ್ವವಿಧ ಬಂಧನಗಳಿಂದ ಬಿಡುಗಡೆ ಹೊಂದಿ, ಪರಮಾತ್ಮನ ಸಾನ್ನಿಧ್ಯದ ದಿವ್ಯವಾದ ಮಹಾಸುಖವನ್ನು ಅನುಭವಿಸುವರು. ॥೩೮॥

**ಜೋ ಯಹ ಪಢೈ ಹನುಮಾನ ಚಾಲೀಸಾ ।**
**ಹೋಯ ಸಿದ್ಧಿ ಸಾಖೀ ಗೌರೀಸಾ ॥೩೯॥**

ಈ 'ಹನುಮಾನ್ ಚಾಲೀಸಾ' ಎಂಬ ಹನುಮಂತನ ಸ್ತೋತ್ರವನ್ನು ಪಠಣ ಮಾಡುವವರಿಗೆ ಪರಮಾತ್ಮನ ಸಾಕ್ಷಾತ್ಕಾರ ರೂಪೀ ಚಿರಸಿದ್ಧಿಯುಂಟಾಗುವುದು. ಇದಕ್ಕೆ ಗೌರೀಪತಿ ಶಂಕರನೇ ಸಾಕ್ಷಿ. ಎಲೈ ವಾಯುನಂದನ! ನಿನಗೆ ಪದೇ-ಪದೇ ನಮಸ್ಕಾರಗಳು. ॥೩೯॥

**ತುಲಸೀದಾಸ ಸದಾ ಹರಿ ಚೇರಾ ।**
**ಕೀಜೈ ನಾಥ ಹೃದಯ ಮಹ್ ಡೇರಾ ॥೪೦॥**

ತುಲಸೀದಾಸರು ಹೇಳುತ್ತಾರೆ – 'ನಾನು ಎಂದೆಂದೂ ಶ್ರೀಹರಿಯ ದಾಸನು. ಹೇ ನಾಥ ! ಪವನ ಪುತ್ರ ! ನೀನು ನನ್ನ ಹೃದಯದಲ್ಲಿ ವಾಸಿಸು. ಆಗ ನನ್ನ ಹೃದಯದೇಗುಲದಲ್ಲಿ ಶ್ರೀರಾಮ, ಸೀತಾಮಾತೆ ಹಾಗೂ ಲಕ್ಷ್ಮಣ ಇವರೆಲ್ಲರೂ ಸಹ ವಾಸ ಮಾಡುತ್ತಾರೆ ಎಂಬುದರಲ್ಲಿ ಸಂಶಯವಿಲ್ಲ. ಹೇ ರಾಮದಾಸ ! ನಿನಗೆ ಅನಂತಕೋಟಿ ಸಾಷ್ಟಾಂಗ ವಂದನೆಗಳು. ॥೪೦॥

## ದೋಹಾ

**ಪವನತನಯ ಸಂಕಟ ಹರನ ಮಂಗಲ ಮೂರುತಿ ರೂಪ ।**
**ರಾಮ ಲಖನ ಸೀತಾ ಸಹಿತ ಹೃದಯ ಬಸಹು ಸುರ ಭೂಪ ॥**

ಹೇ ಪವನಪುತ್ರ ಹನುಮಾನ್! ನೀನು ಜನನ-ಮರಣರೂಪೀ ಭವರೋಗದ ಸಂಕಟದಿಂದ ಪಾರು ಮಾಡುವವನು. ಮಂಗಳ ಮೂರ್ತಿ ಸ್ವರೂಪಿಯೇ, ದೇವಾದಿ ದೇವತೆಗಳೊಡೆಯ ಶ್ರೀರಾಮ, ಲಕ್ಷ್ಮಣ ಮತ್ತು ಸೀತಾ ಮಾತೆ ಇವರೆಲ್ಲಾ ನಿನ್ನ ಹೃದಯದಲ್ಲಿ ನೆಲಸಿದ್ದಾರೆ. ನಿನಗೆ ಶರಣು ! ಹನುಮಂತನ ಸಹಿತವಾಗಿ ಇವರೆಲ್ಲಾ ನನ್ನ ಹೃದಯದಲ್ಲಿ ನೆಲಸಿ ನನ್ನನ್ನು ಅನುಗ್ರಹಿಸಲಿ.

## ಶ್ರೀ ಹನುಮತ್ - ಸ್ತವನಮ್

ಪ್ರನವಉ ಪವನಕುಮಾರ ಖಲ ಬನ ಪಾವಕ ಗ್ಯಾನಘನ ।
ಜಾಸು ಹೃದಯ ಆಗಾರ ಬಸಹಿಂ ರಾಮ ಸರ ಚಾಪ ಧರ ॥
ಅತುಲಿತ ಬಲ ಧಾಮಂ ಹೇಮಶೈಲಾಭದೇಹಂ
ದನುಜವನಕೃಶಾನುಂ ಜ್ಞಾನಿನಾಮಗ್ರಗಣ್ಯಮ್ ।
ಸಕಲ ಗುಣನಿಧಾನಂ ವಾನರಾಣಾಮಧೀಶಂ
ರಘುಪತಿಪ್ರಿಯಭಕ್ತಂ ವಾತಜಾತಂ ನಮಾಮಿ ॥

ಗೋಷ್ಪದೀಕೃತವಾರೀಶಂ ಮಶಕೀಕೃತರಾಕ್ಷಸಮ್ ।
ರಾಮಾಯಣಮಹಾಮಾಲಾರತ್ನಂ ವಂದೇಽನಿಲಾತ್ಮಜಮ್ ॥
ಅಂಜನಾನಂದನಂ ವೀರಂ ಜಾನಕೀ ಶೋಕನಾಶನಾಮ್ ।
ಕಪೀಶಮಕ್ಷಹಂತಾರಂ ವಂದೇ ಲಂಕಾಭಯಂಕರಮ್ ॥
ಉಲ್ಲಂಘ್ಯ ಸಿಂಧೋಃ ಸಲಿಲಂ ಸಲೀಲಂ
ಯಃ ಶೋಕವಹ್ನಿಂ ಜನಕಾತ್ಮಜಾಯಾಃ ।
ಆದಾಯ ತೇನೈವ ದದಾಹ ಲಂಕಾಂ
ನಮಾಮಿ ತಂ ಪ್ರಾಂಜಲಿರಾಂಜನೇಯಮ್ ॥
ಮನೋಜವಂ ಮಾರುತತುಲ್ಯವೇಗಂ
ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಮ್ ।
ವಾತಾತ್ಮಜಂ ವಾನರಯೂಥಮುಖ್ಯಂ
ಶ್ರೀರಾಮದೂತಂ ಶರಣಂ ಪ್ರಪದ್ಯೇ ॥

ಆಂಜನೇಯಮತಿಪಾಟಲಾನನಂ ಕಾಂಚನಾದ್ರಿಕಮನೀಯವಿಗ್ರಹಮ್।
ಪಾರಿಜಾತತರುಮೂಲವಾಸಿನಂ ಭಾವಯಾಮಿ ಪವಮಾನನಂದನಮ್॥
ಯತ್ರ ಯತ್ರ ರಘುನಾಥಕೀರ್ತನಂ ತತ್ರ ತತ್ರ ಕೃತಮಸ್ತಕಾಂಜಲಿಮ್।
ಬಾಷ್ಪವಾರಿಪರಿಪೂರ್ಣಲೋಚನಂ ಮಾರುತಿಂ ನಮತ ರಾಕ್ಷಸಾಂತಕಮ್॥

# ಶ್ರೀಆಂಜನೇಯಾಷ್ಟೋತ್ತರ ಶತನಾಮಾವಳಿ

ಓಂ ಆಂಜನೇಯಾಯ ನಮಃ
ಓಂ ಮಹಾವೀರಾಯ ನಮಃ
ಓಂ ಹನುಮತೇ ನಮಃ
ಓಂ ಮಾರುತಾತ್ಮಜಾಯ ನಮಃ
ಓಂ ತತ್ತ್ವಜ್ಞಾನಪ್ರದಾಯ ನಮಃ
ಓಂ ಸೀತಾದೇವೀಮುದ್ರಾಪ್ರದಾಯಕಾಯ ನಮಃ
ಓಂ ಅಶೋಕವನಿಕಾಚ್ಛೇತ್ರೇ ನಮಃ
ಓಂ ಸರ್ವಮಾಯಾ ವಿಭಂಜನಾಯ ನಮಃ
ಓಂ ಸರ್ವಬಂಧವಿಮೋಕ್ತ್ರೇ ನಮಃ
ಓಂ ರಕ್ಷೋವಿಧ್ವಂಸಕಾರಕಾಯ ನಮಃ ॥೧೦॥

ಓಂ ಪರವಿದ್ಯಾಪರೀಹಾರಾಯ ನಮಃ

ಓಂ ಪರಶೌರ್ಯವಿನಾಶನಾಯ ನಮಃ

ಓಂ ಪರಮಂತ್ರನಿರಾಕರ್ತ್ರೇ ನಮಃ

ಓಂ ಪರಯಂತ್ರಪ್ರಭೇದಕಾಯ ನಮಃ

ಓಂ ಸರ್ವಗ್ರಹವಿನಾಶಿನೇ ನಮಃ

ಓಂ ಭೀಮಸೇನಸಹಾಯಕೃತೇ ನಮಃ

ಓಂ ಸರ್ವದುಃಖಹರಾಯ ನಮಃ

ಓಂ ಸರ್ವಲೋಕಚಾರಿಣೇ ನಮಃ

ಓಂ ಮನೋಜವಾಯ ನಮಃ

ಓಂ ಪಾರಿಜಾತದ್ರುಮಮೂಲಸ್ಥಾಯ ನಮಃ ||೨೦||

ಓಂ ಸರ್ವಮಂತ್ರಸ್ವರೂಪವತೇ ನಮಃ

ಓಂ ಸರ್ವತಂತ್ರಸ್ವರೂಪಿಣೇ ನಮಃ

ಓಂ ಸರ್ವಯಂತ್ರಾತ್ಮಕಾಯ ನಮಃ

ಓಂ ಕಪೀಶ್ವರಾಯ ನಮಃ

ಓಂ ಮಹಾಕಾಯಾಯ ನಮಃ

ಓಂ ಸರ್ವರೋಗಹರಾಯ ನಮಃ

ಓಂ ಪ್ರಭವೇ ನಮಃ

ಓಂ ಬಲಸಿದ್ಧಿಕರಾಯ ನಮಃ

ಓಂ ಸರ್ವವಿದ್ಯಾಸಂಪತ್ಪ್ರದಾಯಕಾಯ ನಮಃ

ಓಂ ಕಪಿಸೇನಾನಾಯಕಾಯ ನಮಃ ||೩೦||

ಓಂ ಭವಿಷ್ಯಚ್ಚತುರಾನನಾಯ ನಮಃ
ಓಂ ಕುಮಾರಬ್ರಹ್ಮಚಾರಿಣೇ ನಮಃ
ಓಂ ರತ್ನಕುಂಡಲದೀಪ್ತಿಮತೇ ನಮಃ
ಓಂ ಚಂಚಲದ್ವಾಲಸನ್ನದ್ಧಲಂಬಮಾನ
ಶಿಖೋಜ್ವಲಾಯ ನಮಃ
ಓಂ ಗಂಧರ್ವವಿದ್ಯಾತತ್ತ್ವಜ್ಞಾಯ ನಮಃ
ಓಂ ಮಹಾಬಲಪರಾಕ್ರಮಾಯ ನಮಃ
ಓಂ ಕಾರಾಗೃಹವಿಮೋಚಕಾಯ ನಮಃ
ಓಂ ಶೃಂಖಲಾಬಂಧಮೋಚಕಾಯ ನಮಃ
ಓಂ ಸಾಗರೋತ್ತಾರಕಾಯ ನಮಃ
ಓಂ ಪ್ರಾಜ್ಞಾಯ ನಮಃ ॥೪೦॥
ಓಂ ರಾಮದೂತಾಯ ನಮಃ
ಓಂ ಪ್ರತಾಪವತೇ ನಮಃ
ಓಂ ವಾನರಾಯ ನಮಃ
ಓಂ ಕೇಸರೀಸುತಾಯ ನಮಃ
ಓಂ ಸೀತಾಶೋಕನಿವಾರಣಾಯ ನಮಃ
ಓಂ ಅಂಜನಾಗರ್ಭಸಂಭೂತಾಯ ನಮಃ
ಓಂ ಬಾಲಾರ್ಕಸದೃಶಾನನಾಯ ನಮಃ
ಓಂ ವಿಭೀಷಣಪ್ರಿಯಕರಾಯ ನಮಃ
ಓಂ ದಶಗ್ರೀವಕುಲಾಂತಕಾಯ ನಮಃ

ಓಂ ಲಕ್ಷ್ಮಣಪ್ರಾಣದಾತ್ರೇ ನಮಃ ॥೫೦॥
ಓಂ ವಜ್ರಕಾಯಾಯ ನಮಃ
ಓಂ ಮಹಾದ್ಯುತಯೇ ನಮಃ
ಓಂ ಚಿರಂಜೀವಿನೇ ನಮಃ
ಓಂ ರಾಮಭಕ್ತಾಯ ನಮಃ
ಓಂ ದೈತ್ಯಕಾರ್ಯ ವಿಘಾತಕಾಯ ನಮಃ
ಓಂ ಅಕ್ಷಹಂತ್ರೇ ನಮಃ
ಓಂ ಕಾಂಚನಾಭಾಯ ನಮಃ
ಓಂ ಪಂಚವಕ್ತ್ರಾಯ ನಮಃ
ಓಂ ಮಹಾತಪಸೇ ನಮಃ

ಓಂ ಲಂಕಿನೀಭಂಜನಾಯ ನಮಃ ॥೬೦॥
ಓಂ ಶ್ರೀಮತೇ ನಮಃ
ಓಂ ಸಿಂಹಿಕಾಪ್ರಾಣಭಂಜನಾಯ ನಮಃ
ಓಂ ಗಂಧಮಾದನಶೈಲಸ್ಥಾಯ ನಮಃ
ಓಂ ಲಂಕಾಪುರವಿದಾಹಕಾಯ ನಮಃ
ಓಂ ಸುಗ್ರೀವ ಸಚಿವಾಯ ನಮಃ
ಓಂ ಧೀರಾಯ ನಮಃ
ಓಂ ಶೂರಾಯ ನಮಃ
ಓಂ ದೈತ್ಯಕುಲಾಂತಕಾಯ ನಮಃ
ಓಂ ಸುರಾರ್ಚಿತಾಯ ನಮಃ

ಓಂ ಮಹಾತೇಜಸೇ ನಮಃ ॥೭೦॥

ಓಂ ರಾಮಚೂಡಾಮಣಿಪ್ರದಾಯ ನಮಃ

ಓಂ ಕಾಮರೂಪಿಣೇ ನಮಃ

ಓಂ ಪಿಂಗಳಾಕ್ಷಾಯ ನಮಃ

ಓಂ ವಾರ್ಧಿಮೈನಾಕಪೂಜಿತಾಯೈ ನಮಃ

ಓಂ ಕಬಳೀಕೃತಮಾರ್ತಾಂಡಮಂಡಲಾಯ

ಓಂ ವಿಜಿತೇಂದ್ರಿಯಾಯ ನಮಃ

ಓಂ ರಾಮಸುಗ್ರೀವಸಂಧಾತ್ರೇ ನಮಃ

ಓಂ ಅಹಿರಾವಣಮರ್ದನಾಯ ನಮಃ

ಓಂ ಸ್ಫಟಿಕಾಭಾಯ ನಮಃ

ಓಂ ವಾಗಧೀಶಾಯ ನಮಃ ॥೮೦॥

ಓಂ ನವವ್ಯಾಕೃತಿಪಂಡಿತಾಯ ನಮಃ

ಓಂ ಚತುರ್ಬಾಹವೇ ನಮಃ

ಓಂ ದೀನಬಂಧವೇ ನಮಃ

ಓಂ ಮಹಾತ್ಮನೇ ನಮಃ

ಓಂ ಭಕ್ತವತ್ಸಲಾಯ ನಮಃ

ಓಂ ಸಂಜೀವನನಗಾಹರ್ತ್ರೇ ನಮಃ

ಓಂ ಶುಚಯೇ ನಮಃ

ಓಂ ವಾಗ್ಮಿನೇ ನಮಃ

ಓಂ ದೃಢವ್ರತಾಯ ನಮಃ

ಓಂ ಕಾಲನೇಮಿಪ್ರಮಥನಾಯ ನಮಃ ॥೯೦॥

ಓಂ ಹರಿಮರ್ಕಟಮರ್ಕಟಾಯ ನಮಃ

ಓಂ ದಾಂತಾಯ ನಮಃ

ಓಂ ಶಾಂತಾಯ ನಮಃ

ಓಂ ಪ್ರಸನ್ನಾತ್ಮನೇ ನಮಃ

ಓಂ ಶತಕಂಠಮದಾಪಹೃತೇ ನಮಃ

ಓಂ ಯೋಗಿನೇ ನಮಃ

ಓಂ ರಾಮಕಥಾಲೋಲಾಯ ನಮಃ

ಓಂ ಸೀತಾನ್ವೇಷಣಪಂಡಿತಾಯ ನಮಃ

ಓಂ ವಜ್ರದಂಷ್ಟ್ರಾಯ ನಮಃ

ಓಂ ವಜ್ರನಖಾಯ ನಮಃ ॥೧೦೦॥

ಓಂ ರುದ್ರವೀರ್ಯಸಮುದ್ಭವಾಯ ನಮಃ

ಓಂ ಇಂದ್ರಜಿತ್ಪ್ರಹಿತಾಮೋಘ
ಬ್ರಹ್ಮಾಸ್ತ್ರವಿನಿವಾರಕಾಯ ನಮಃ

ಓಂ ಪಾರ್ಥಧ್ವಜಾಗ್ರಸಂವಾಸಿನೇ ನಮಃ

ಓಂ ಶರಪಂಜರಭೇದಕಾಯ ನಮಃ

ಓಂ ದಶಬಾಹವೇ ನಮಃ

ಓಂ ಲೋಕಪೂಜ್ಯಾಯ ನಮಃ

ಓಂ ಜಾಂಬವತ್ಪ್ರೀತಿವರ್ಧನಾಯ ನಮಃ

ಓಂ ಸೀತಾಸಮೇತ ಶ್ರೀರಾಮ
ಪಾದಸೇವಾಧುರಂಧರಾಯ ನಮಃ ॥೧೦೮॥

ಇತಿ ಆಂಜನೇಯ ಅಷ್ಟೋತ್ತರ ಶತನಾಮಾವಳಿ

# ಶ್ರೀರಾಮವಂದನಾ

ಆಪದಾಮಪಹರ್ತಾರಂ ದಾತಾರಂ ಸರ್ವಸಂಪದಾಮ್ ।
ಲೋಕಾಭಿರಾಮಂ ಶ್ರೀರಾಮಂ ಭೂಯೋ ಭೂಯೋ ನಮಾಮ್ಯಹಮ್ ॥
ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ ।
ರಘುನಾಥಯ ನಾಥಾಯ ಸೀತಾಯಾಃ ಪತಯೇ ನಮಃ ॥
ನೀಲಾಂಬುಜಶ್ಯಾಮಲಕೋಮಲಾಂಗಂ ಸೀತಾಸಮಾರೋಪಿತವಾಮಭಾಗಮ್ ।
ಪಾಣೌ ಮಹಾಸಾಯಕಚಾರುಚಾಪಂ ನಮಾಮಿ ರಾಮಂ ರಘುವಂಶನಾಥಮ್ ॥
ಮಾತಾ ರಾಮೋ ಮತ್ಪಿತಾ ರಾಮಚಂದ್ರಃ ಭ್ರಾತಾ ರಾಮೋ ಮತ್ಸಖಾ ರಾಘವೇಶಃ ।
ಸರ್ವಸ್ವಂ ಮೇ ರಾಮಚಂದ್ರೋದಯಾಲು ರ್ನಾನ್ಯಂ ದೈವಂ ನೈವ ಜಾನೇ ನ ಜಾನೇ ॥
ನಮೋಽಸ್ತುರಾಮಾಯ ಸಲಕ್ಷಣಾಯ ದೇವ್ಯೈ ಚ ತಸ್ಯೈ ಜನಕಾತ್ಮಜಾಯೈ ।
ನಮೋಸ್ತುರುದ್ರೇಂದ್ರಯಮಾನಿಲೇಭ್ಯೋ ನಮೋಽಸ್ತುಚಂದ್ರಾರ್ಕಮರುದ್ಗಣೇಭ್ಯಃ ॥

# ಶ್ರೀರಾಮ-ಸ್ತುತಿ

ಶ್ರೀರಾಮಚಂದ್ರ ಕೃಪಾಲು ಭಜು ಮನ ಹರಣ ಭವಭಯ ದಾರುಣಮ್ ।
ನವಕುಂಜ-ಲೋಚನ, ಕಂಜ-ಮುಖ, ಕರ - ಕಂಜ ಪದ ಕಂಚಾರುಣಮ್ ॥
ಕಂದರ್ಪ ಅಗಣಿತ ಅಮಿತ ಛಬಿ, ನವನೀಲ - ನೀರದ ಸುಂದರಮ್ ।
ಪಟ ಪೀತ ಮಾನಹು ತಡಿತ ರುಚಿ ಶುಚಿ ನೌಮಿ ಜನಕ ಸುತಾವರಮ್ ॥
ಭಜು ದೀನಬಂಧು ದಿನೇಶ ದಾನವ - ದೈತ್ಯವಂಶ - ನಿಕಂದನಮ್ ।
ರಘುನಂದ ಆನಂದಕಂದ ಕೋಶಲಚಂದ ದಶರಥ - ನಂದನಮ್ ॥
ಸಿರ ಮುಕುಟ ಕುಂಡಲ ತಿಲಕ ಚಾರು ಉದಾರು ಅಂಗ ಬಿಭೂಷಣಮ್ ।
ಆಜಾನುಭುಜ ಶರ - ಚಾಪ - ಧರ, ಸಂಗ್ರಾಮ - ಜಿತ - ಖರದೂಷಣ್ ॥
ಇತಿ ವದತಿ ತುಲಸೀದಾಸ ಶಂಕರ - ಶೇಷ - ಮುನಿ - ಮನ - ರಂಜನಮ್ ।
ಮಮ ಹೃದಯ - ಕಂಜ ನಿವಾಸ ಕುರು, ಕಾಮಾದಿ ಖಲ-ದಲ-ಗಂಜನಮ್ ॥

# ಶ್ರೀ ಹನುಮಾನ್‌ಜೀ ಕೀ ಆರತೀ

ಆರತೀ ಕೀಜೈ ಹನುಮಾನ ಲಲಾಕೀ । ದುಷ್ಟದಲನ ರಘುನಾಥ ಕಲಾ ಕೀ ॥ಪ॥
ಜಾಕೇ ಬಲ ಸೇ ಗಿರಿವರ ಕಾಂಪೈ । ರೋಗ-ದೋಷ ಜಾಕೇ ನಿಕಟ ನ ಝಾಂಪೈ ॥೧॥
ಅಂಜನಿ ಪುತ್ರ ಮಹಾ ಬಲದಾಈ । ಸಂತನ ಕೇ ಪ್ರಭು ಸದಾ ಸಹಾಈ ॥೨॥
ದೇ ಬೀರಾ ರಘುನಾಥ ಪಠಾಯೇ । ಲಂಕಾ ಜಾರಿ ಸಿಯಾ ಸುಧಿ ಲಾಯೇ ॥೩॥
ಲಂಕಾ ಸೊ ಕೋಟ ಸಮುದ್ರ ಸೀ ಖಾಈ । ಜಾತ ಪವನಸುತ ಬಾರ ನ ಲಾಈ ॥೪॥
ಲಂಕಾ ಜಾರಿ ಅಸುರ ಸಂಹಾರೇ । ಸಿಯಾರಾಮಜೀಕೇ ಕಾಜ ಸಂವಾರೇ ॥೫॥
ಲಕ್ಷ್ಮಣ ಮೂರ್ಛಿತ ಪಡೇ ಸಕಾರೇ । ಆನಿ ಸಜೀವನ ಪ್ರಾನ ಉಬಾರೇ ॥೬॥
ಪೈಠಿ ಪತಾಳ ತೋರಿ ಜಮ-ಕಾರೇ । ಅಹಿರಾವನ ಕೀ ಭುಜಾ ಉಖಾರೇ ॥೭॥
ಬಾಯೇಂ ಭುಜಾ ಅಸುರ ದಳ ಮಾರೇ । ದಹಿನೇ ಭುಜಾ ಸಂತಜನ ತಾರೇ ॥೮॥
ಸುರ ನರ ಮುನಿ ಆರತೀ ಉತಾರೇ । ಜಯ ಜಯ ಜಯ ಹನುಮಾನ ಉಚಾರೇ ॥೯॥
ಕಂಚನ ಥಾರ ಕಪೂರ ಲೌ ಛಾಈ । ಆರತಿ ಕರತ ಅಂಜನಾ ಮಾಈ ॥೧೦॥
ಜೋ ಹನುಮಾನ (ಜೀ) ಕೀ ಆರತಿ ಗಾವೈ । ಬಸಿ ಬೈಕುಂಠ ಪರಮಪದ ಪಾವೈ ॥೧೧॥